**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.599/2010

| | |
|---|---|
| ಸಾಕ್ಷಿದಾರರ ಹೆಸರು | ವಸಂತಮ್ಮ |
| ಗಂಡನ ಹೆಸರು | ಸಿದ್ದೇಗೌಡ |
| ವಯಸ್ಸು | 60 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಬನ್ನಿಮುಕ್ಕೋಡ್ಲು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 19.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರ ಪರಿಚಯ ಇರುತ್ತದೆ. ಅವರು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಚಾಸಾ-1 ನನ್ನ ಯಜಮಾನರು. ಚಾಸಾ-3 ನನ್ನ ಮೈದುನ, ಚಾಸಾ-4 ರಿಂದ 7 ರವರು ಗೊತ್ತಿರುತ್ತಾರೆ.

ಸುಮಾರು 16 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಒತ್ತುವರಿ ಮಾಡಿಕೊಂಡು ಆರೋಪಿತರು ಮನೆ ಕಟ್ಟುವ ಸಂಬಂಧ ಗೂಟ ಹಾಕಿದ್ದರು. ಆ ಸಂದರ್ಭದಲ್ಲಿ ಚಾಸಾ-3 ರವರು ಸ್ದಳಕ್ಕೆ ಬಂದು ಯಾರು ಈ ರೀತಿ ಗೂಟ ಇಟ್ಟಿರುವುದು ಎಂದು ಕೇಳಿದರು. ಅದನ್ನು ಕಿತ್ತು ಹಾಕಿದರು. ಚಾಸಾ-3 ರವರಿಗೆ ರುದ್ರ, ಶಿವರುದ್ರ, ಸತೀಶ ಹಾಗೂ ಕುಮಾರ್ ಇವರುಗಳು ಹೊಡೆದಿರುತ್ತಾರೆ. ನಾನು ಜಗಳ ಬಿಡಿಸಲು ಹೋದಾಗ ಸತೀಶ, ಅವರ ತಾಯಿಯಾದ ಪುಟ್ಟಿ ಹಾಗೂ ಉಳಿದ ಆರೋಪಿತರು ಸೇರಿಕೊಂಡು ನನ್ನ ಎದೆಗೆ ಗುದ್ದಿರುತ್ತಾರೆ. ಚಾಸಾ-1 ರವರು ಸ್ದಳಕ್ಕೆ ಬಂದರು. ಅವರಿಗೂ ಸಹ ದೊಣ್ಣೆಯಿಂದ 4 ಜನ ಆರೋಪಿತರು ಸೇರಿಕೊಂಡು ಹೊಡೆದಿರುತ್ತಾರೆ

CW.2 PW.2

**( ಈ ಹಂತದಲ್ಲಿ ಮಾನ್ಯ ಸಸ ಅ ರವರು ಸಾಕ್ಷಿಯು ನೀಡಿದ ಸಾಕ್ಷ್ಯಧಾರದ ಅನ್ವಯ ಸೂಕ್ತ ಅರ್ಜಿಯನ್ನು ಸಲ್ಲಿಸಲು ಹಾಗೂ ಮುಂದುವದರಿ ಮುಖ್ಯ ವಿಚಾರಣೆಗೆ ಸಮಯವಾಕಾಶ ಕೋರಿದ್ದು ಮುಂದೂಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**